ದಿನಾಂಕ 06/11/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಡಿ.ವಿ.ಎಸ್. 2 ನೇ ಪ್ರತಿವಾದಿ ಪರ ವಕೀಲರಿಂದ**

ನಾನು 2016 ರಿಂದ 2019 ರವರೆಗೆ ಬೆಡತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿರುತ್ತೇನೆ. ವಾದಿ ಈ ದಾವೆಯನ್ನು ಸರ್ವೆ ನಂ-40/4 ಕ್ಕೆ ಹೂಡಿರುತ್ತಾರೆ. ಸದರಿ ಆಸ್ತಿಯ ಖಾತೆ ಪಹಣಿ ವೆಂಕಟರಮಣಪ್ಪ ರವರ ಹೆಸರಿನಲ್ಲಿ ಬರುತ್ತಿವೆ. ವೆಂಕಟರಮಣಪ್ಪ ರವರಿಗೆ ಸದರಿ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಆ ರೀತಿ ಪಿತ್ರಾರ್ಜಿತವಾಗಿ ಆಸ್ತಿಗಳು ಬಂದಿರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ವೆಂಕಟಪ್ಪ, ಹನುಮಂತಯ್ಯ ತಿಮ್ಮಯ್ಯ ಮತ್ತು ರಾಮಯ್ಯ ಎಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಮೊದಲು ಊರಿನಲ್ಲಿ ಇದ್ದು ನಂತರ 30 ವರ್ಷಗಳಿಂದ ಬೇರೆ ಬೇರೆ ಹೋಗಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ವೆಂಕಟಪ್ಪ ರವರು ಕಟ್ಟಿರುವ ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯನ್ನು ಕಟ್ಟಿ 2 ವರ್ಷ ಆಗಿದ್ದು ಅಲ್ಲಿಯೇ ವೆಂಕಟಪ್ಪ ರವರು ವಾಸ ಇರುತ್ತಾರೆ. ಸಾಕ್ಷಿ ಮುಂದುವರೆದು ಮೊದಲು ತುಮಕೂರಿನಲ್ಲಿ ಇದ್ದರು ಎಂದು ಉತ್ತರಿಸಿರುತ್ತಾರೆ.

2. ಮನೆಯ ಮುಂದೆ ಉತ್ತರ ದಿಕ್ಕಿಗೆ ಗ್ರಾಮಠಾಣಾ ಜಾಗ ಇರುತ್ತದೆ. ನಂತರ ಹನುಮಕ್ಕನ ನಿವೇಶನ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಹನುಮಕ್ಕನ ನಿವೇಶನ ಸದರಿ ನಿವೇಶನ ಅವರಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ತಹಸೀಲ್ದಾರ್ ಹನುಮಕ್ಕನಿಗೆ ಖಾನೇಷು ಮಾರಿ ಜಾಗ ಮಂಜೂರು ಮಾಡಿರುತ್ತಾರೆ. ಸರ್ವೆ ನಂ-40/4 ರ ಜಮೀನು ಹನುಮಕ್ಕ ಇವರಿಗೆ ಸೇರಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಮಾರಾಟ ಆಗದೇ ಇರುವ ಬಗ್ಗೆ ನಾನು ಇ.ಸಿ. ನೋಡಿರುತ್ತೇನೆ ಸದರಿ ಇ.ಸಿ ರಾಮಯ್ಯ ಮತ್ತು ತಿಮ್ಮಯ್ಯ ರವರ ಹೆಸರಿನಲ್ಲಿರುತ್ತದೆ.

3. ಕೃಷ್ಣಯ್ಯಶೆಟ್ಟಿ ರವರನ್ನು ನಾನು ನೋಡಿರುತ್ತೇನೆ. ಸದರಿ ಕೃಷ್ಣಯ್ಯಶೆಟ್ಟಿ ರವರು ದಿ.06/07/1954 ರಲ್ಲಿ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಕೃಷ್ಣಯ್ಯಶೆಟ್ಟಿ ರವರಿಗೆ ಪಿತ್ರಾರ್ಜಿತವಾಗಿ ಬಂದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಕೃಷ್ಣಯ್ಯಶೆಟ್ಟಿ ತೀರಿಕೊಂಡ ನಂತರ ಆತನ ಹೆಂಡತಿ ರತ್ನಮ್ಮ ಇವರು ಪ್ರತಿವಾದಿ ತಂದೆಗೆ ದಿ.24/09/1990 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಆದಾಗಿನಿಂದಲೂ ಸದರಿ ಆಸ್ತಿ ಪ್ರತಿವಾದಿ ತಂದೆ ಹೆಸರಿನಲ್ಲಿದ್ದು ತದ ನಂತರ ಪ್ರತಿವಾದಿ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮೂಲ ದಾವೆ ಸಂಖ್ಯೆ-12/2017 ರಲ್ಲಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗದಂತೆ ಅವರವ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ಇತ್ತೀಚೆಗೆ ಮಾಡಿಕೊಂಡಿರಬಹುದು ಎಂದು ಉತ್ತರಿಸಿರುತ್ತಾರೆ.

4. 2016 ನೇ ಸಾಲಿನಲ್ಲಿ ಪ್ರತಿವಾದಿ ತನ್ನ ಭಾಗದ ಆಸ್ತಿಯಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಬೋರ್ ವೆಲ್ ತೆಗೆಸಿ ಸರ್ವೆ ನಂ- 40/4 ರಲ್ಲಿ ಬೆಳೆ ಇಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಬೋರ್ ವೆಲ್ ಇದೆ ಆದರೆ ಬೆಳೆ ಯಾರು ತೆಗೆಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿದ್ದ ಕಾರಣ ನಮ್ಮ ಪಂಚಾಯಿತಿಯಲ್ಲಿ ಕಂದಾಯ, ಖಾತಾ ಮತ್ತು ನೋಅಬ್ಕ್ಷನ್ ಪತ್ರವನ್ನು ಕೊಡುತ್ತೇವೆ ಎಂದರೆ ಸರಿ. ಪಂಚಾಯಿತಿಯಲ್ಲಿ ಅನುಮತಿ ನೀಡಬೇಕಾದರೆ ಹಕ್ಕುದಾರರನ್ನು ಪರಿಶೀಲನೆ ನೀಡುತ್ತೇವೆ ಎಂದರೆ ಸರಿ. ನಾವು ಇತ್ತೀಚೆಗೆ ಪ್ರತಿವಾದಿ ಮನೆ ಮುಂದೆ ಜೆಸಿಬಿಯಿಂದ ಗುಂಡಿ ತೆಗೆಸಿರುತ್ತೇವೆ ಎಂದರೆ ಸಾಕ್ಷಿ ಆದೇಶದಂತೆ ತೆಗೆದಿರುತ್ತಾರೆಂದು ಉತ್ತರಿಸಿರುತ್ತಾರೆ. ನಾವು ಅಕ್ರಮವಾಗಿ ಜೆಸಿಬಿಯಿಂದ ಗುಂಡಿ ತೆಗೆಸಿದ ಕಾರಣ ಪ್ರತಿವಾದಿ ಖಾಸಗಿ ಪಿರ್ಯಾದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಗಳಿಗೆ ಆಗಲೀ ಅವರ ಕುಟುಂಬದವರಿಗೆ ಆಗಲೀ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

5. ನನಗೂ ಮತ್ತು ಪ್ರತಿವಾದಿಗೂ ಮೊದಲಿನಿಂದಲೂ ದ್ವೇಷ ಇರುವ ಕಾರಣ ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆ ವಿಚಾರ ಏನು ಗೊತ್ತಿಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ